ಮುಖದಲ್ಲಿ ಅದೇ ಹಿಂದಿನ ನಗುವನ್ನು ತಂದುಕೊಂಡು ಕುಶಲೋಪರಿ ವಿಚಾರಿಸಿಕೊಂಡಿದ್ದ. 'ತುಂಬ ಹೊತ್ತಾಗಿಬಿಟ್ಟಿದೆ ಅಮ್ಮಾವ್ರೆ,' ಎಂದು ಹೇಳಿದ ಅವನ ಮುಖಭಾವದಿಂದಲೇ ವೈಯಕ್ತಿಕ ವಿಷಯಗಳನ್ನು ಚರ್ಚಿಸುವುದು ಇಷ್ಟವಿರಲಿಕ್ಕಿಲ್ಲ ಎಂಬ ಸುಳಿವು ಸಿಕ್ಕಿತ್ತು. ಹಾಗೆಯೆ ಬೀದಿಯಲ್ಲಿ ನಾವು ಇಷ್ಟೊಂದು ಜನರಿರುವಾಗ ಕುಟುಂಬದ ವಿಷಯವನ್ನು ಚರ್ಚಿಸುವುದೂ ಸರಿಯಲ್ಲ. ಅವರವರ ಬದುಕು ಅವರವರಿಗೆ ಎಂದು ವಿವೇಕ ಎಚ್ಚರಿಸಿದ್ದರಿಂದ ಕುತೂಹಲವನ್ನು ಹೇಗೋ ತಡೆದುಕೊಂಡೆ.

'ತುಂಬಾ ಹೊತ್ತಾಗಿಬಿಟ್ಟಿದೆ... ನಾನಿನ್ನು ಬರಲೆ' ಎಂದು ಹೊರಡುವ ಗಡಿಬಿಡಿ ತೋರಿದ್ದ. ಹಿಂದಿನ ಬಾಲನ್ ತುಸು ಬದಲಾಗಿದ್ದಾನೆಯೆ? ಏನಾದರಾಗಲಿ ಸಹಜವಾಗಿ, ಸಂಕ್ಷಿಪ್ತವಾಗಿ ವಿಚಾರಿಸಿದರೇನಂತೆ... 'ಹೆಂಡತಿ ಚೆನ್ನಾಗಿದ್ದಾಳಾ... ಇಲ್ಲಿಗೆ ಬಂದಿದ್ದಾಳಾ' ಎಂದು ಕೇಳಿಯೇಬಿಟ್ಟೆ.

'ಚೆನ್ನಾಗಿದ್ದಾಳಮ್ಮ... ಅಲ್ಲಿಯೇ ಇದ್ದಾಳೆ.' ಚುಟುಕಾಗಿಯೇ ಉತ್ತರಿಸಿ ಹೊರಡಲನುವಾಗುತ್ತಿದ್ದ. ಅಷ್ಟಕ್ಕೆ ಸಮಾಧಾನವಾಗದೆ ಹಲವಾರು ಪ್ರಶ್ನೆಗಳು ಸವಾರಿ ಮಾಡತೊಡಗಿದ್ದವು. ವಿಶೇಷದ ಸಂಗತಿಯಾದರೆ ಸಂತೋಷದಿಂದ ಅವನು ಅದನ್ನು ನಮ್ಮೊಂದಿಗೆ ಹಂಚಿಕೊಳ್ಳಬಹುದಲ್ಲ. ನಮಗೂ ಖುಶಿಯಾಗುತ್ತದೆ. ನನ್ನ ಮೂಗಿನ ನೇರಕ್ಕೆ ಯೋಚನೆಗಳು ಹರಿದಿದ್ದವು. ಶ್ರೀಮಂತರು ಅಥವಾ ತುಂಬಾ ಗತ್ತಿನವರು ಎಂದಾದರೆ ಅವರ ವೈಯಕ್ತಿಕ ವಿಷಯಗಳನ್ನು ಹೀಗೆಲ್ಲಾ ಕೆದಕುತ್ತೇವೆಯೆ... ಬಾಯಿ ಬಿಡುವುದಕ್ಕೂ ಮೀನಮೇಷ ಎಣಿಸುತ್ತೇವೆ. ಅದೇಕೆ ಕೆಲವರನ್ನು ಕಂಡರೆ ಇಷ್ಟೊಂದು ಸಲಿಗೆ ತೆಗೆದುಕೊಂಡುಬಿಡುತ್ತೇವೆ. ಮಕ್ಕಳ ಹತ್ತಿರವೂ ಸಮಯಸಂದರ್ಭ ನೋಡಿ ಮಾತನಾಡುವ ಕಾಲ ಇದು. ಹಾಗಿರುವಾಗ ನನ್ನದು ಅತಿಯಾಯಿತೇನೊ ಎನ್ನಿಸಿ ಮನೆಯಲ್ಲಿ ತರಕಾರಿಯಿದ್ದರೂ ಒಂದಿಷ್ಟು ಹುರಳಿಕಾಯಿ ಕೊಂಡವಳು ಮೆಲ್ಲನೆ ಮನೆಗೆ ಬಂದಿದ್ದೆ. ಅಲ್ಲಿಗೂ ಶಾಂತವಾಗದ ಮನಸ್ಸು. ಕೊನೆಗೂ ಪೆನ್ನಿನೊಂದಿಗೆ ಚೀಟಿಯೊಂದನ್ನು ತೆಗೆದುಕೊಂಡು ಫೋನ್ ನಂಬರ್‌ಗಾಗಿ ಅವನ ಬಳಿ ಓಡಿದ್ದೆ.

ನನ್ನ ಉದ್ದೇಶ ಅರ್ಥವಾದವನಂತೆ ತುಸು ನಕ್ಕು ನಂಬರ್ ಬರೆದುಕೊಟ್ಟಿದ್ದ. ಹಾಗೆಂದು ಏಕೆ, ಏನು ಎಂದೇನೂ ವಿಚಾರಿಸದೆ, 'ಹುರಳಿಕಾಯಿ, ಬೆಂಡೇಕಾಯಿ...' ಎಂದು ತನ್ನ ಧಾಟಿಯಲ್ಲಿ ಕೂಗುತ್ತಾ ಮುಂದೆ ಹೊರಟಿದ್ದ. ಮನೆಗೆ ಬಂದವಳಿಗೂ ಅದೇ ಚಿಂತೆ. ಏನೆಂದು ಫೋನ್ ಮಾಡುವುದು... ಯಾವಾಗ ಮಾತನಾಡುವುದು... ಅವನಿಗೆ ಬಿಡುವಾಗುವುದು ಎಷ್ಟು ಹೊತ್ತಿಗೆ... ಅವನೀಗ ಪೋಷಕರೊಂದಿಗೇ ಇದ್ದಾನೆಯೆ... ಹೆಂಡತಿ ಗರ್ಭಿಣಿಯೆ... ಆಗಿದ್ದರೆ ಎಷ್ಟು ತಿಂಗಳು... ಅವಳು ಇಲ್ಲಿಗೆ ಬರುವುದಿದೆಯೆ... ಹೆರಿಗೆ ಎಲ್ಲಿ ಎಂದು ನಿಶ್ಚಯಿಸಿದ್ದಾರೆಯೆ... ಇತ್ಯಾದಿ... ಇತ್ಯಾದಿ... ಪಟ್ಟಿ ಬೆಳೆಯುತ್ತಲೇ ಇತ್ತು. ಕೂಸು ಹುಟ್ಟುವುದಕ್ಕೆ ಮುಂಚೆಯೇ ಕುಲಾವಿ ಎಂಬಂತೆ ಬಸರಿ ಎಂಬ ಖಾತ್ರಿಯೇ ಇಲ್ಲದೆ ಮನಸ್ಸನ್ನು ಹೇಗೆಲ್ಲಾ ಹರಿಬಿಟ್ಟಿದ್ದೇನಲ್ಲ... ಅವನ ಬದುಕಿನ ಕುರಿತು ಇಷ್ಟೇಕೆ ಆಸಕ್ತಿ ವಹಿಸುತ್ತಿದ್ದೇನೆ... ಇಷ್ಟೊಂದು ಅವಸರ ಒಳ್ಳೆಯದಲ್ಲ ಎನಿಸಿ ನಾನಾಗಿಯೆ ಫೋನ್ ಮಾಡಬಾರದು. ಅವನು ಬಂದಾಗಲೂ ಏನೇನೋ ಕೇಳಿ ಅವನಿಗೆ ತಲೆನೋವು ತರಬಾರದು ಎಂದು ನಿರ್ಧರಿಸಿಕೊಂಡೆ. ಆದರೂ ಅವನು ಕೇವಲ ತರಕಾರಿ ಮಾರುವವನು ಎನ್ನುವುದಕ್ಕಿಂತ ಅವನು ನನಗೆ ಮತ್ತೂ ಹತ್ತಿರದವನು ಎನ್ನುವುದೇ ಆಪ್ಯಾಯವೆನಿಸಿತ್ತು. ಓಹ್... ಮದುವೆಗೆಂದು ಅವನಿಗೆ ಏನೂ ಉಡುಗೊರೆ ಕೊಟ್ಟೇ ಇಲ್ಲವಲ್ಲ ಎಂಬುದು ನೆನಪಾಗಿತ್ತು. ಈಗೇನಾದರೂ ಕೊಡಬಹುದೆ...